**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 1565/2020**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿ ಡಬ್ಲ್ಯೂ.1**

**ದಿನಾಂಕಃ 13.06.2024**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು ಹೆಚ್ ವಕೀಲರಿಂದಃ**

ಈ ಹಿಂದೆ ಆರೋಪಿಯು ಟಾಟಾ ಸುಮೋ ಚಾಲನೆ ಮಾಡುತ್ತಿದ್ದರು ಎಂದು ಹೇಳಿದ್ದು ಈಗ ಏನು ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಕುಟುಂಬದಲ್ಲಿ ಯಾರು ಯಾರು ಇದ್ದಾರೆ ಎಂದು ನನಗೆ ಮಾಹಿತಿ ಇದೆ. ಆರೋಪಿಯ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಆರೋಪಿಗೆ ಇಬ್ಬರು ಮಕ್ಕಳು. ಅವರು ಏನು ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ವಾಸವಾಗಿರುವ ಮನೆ ಅವರ ಸ್ವಂತ ಮನೆ. ಸದರಿ ಮನೆ ಆರೋಪಿಗೆ ಯಾವ ಮೂಲದಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹಾಲಿ ಆರೋಪಿ ತಮ್ಮ ಜೀವನೋಪಯಕ್ಕೆ ಏನು ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಓಡಿಸುತ್ತಿದ್ದ ಟಾಟಾ ಸುಮೋ ವಾಹನದ ನಂಬರ್ ನನಗೆ ಗೊತ್ತಿಲ್ಲ. ಆರೋಪಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿಯು ನನ್ನ ಹೆಂಡತಿ ಅಣ್ಣ ಅವರ ಊರಿನಲ್ಲಿ ಮದುವೆಯಾಗಿದ್ದರಿಂದ ನಾನು ಸದರಿ ಊರಿಗೆ ಹೋಗಿ ಬರುತ್ತಿದ್ದರಿಂದ ಆರೋಪಿ ನನಗೆ ಪರಿಚಯ ಎಂದು ನುಡಿಯುತ್ತಾರೆ. ಸದರಿ ಕುರ್ಕಿ ಗ್ರಾಮ ದೊಡ್ಡ ಊರು ಎಂದರೆ ಸರಿ. ಸದರಿ ಊರಿನಲ್ಲಿ ಸುಮಾರು 5-6 ಸಾವಿರ ಜನಸಂಖ್ಯೆ ಇರಬಹುದು ಎಂದರೆ ಸರಿ. ನಾನು ಸದರಿ ಊರಿಗೆ ಹೋಗಿ ಬಂದು ಮಾಡುತ್ತಿದ್ದರಿಂದ ನನಗೆ ಸಾಕಷ್ಟು ಜನ ಪರಿಚಯವಿದ್ದಾರೆ ಎಂದರೆ ಸರಿ. ಅದೇ ರೀತಿ ಆರೋಪಿಯ ಮನೆತನದ ಹೆಸರು ಕಾಮನಹಳ್ಳಿ ಮನೆತನ ಎಂದು ಇದೆ. ಸದರಿ ಮನೆತನಕ್ಕೆ ಸೇರಿದ ಎಷ್ಟು ಮನೆಗಳಿವೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಗ್ರಾಮದಲ್ಲಿ ಬೇರೆ ಮನೆತನದ ಎಷ್ಟು ಮನೆತನಗಳು ಇವೆ ಎಂದು ನನಗೆ ಗೊತ್ತಿಲ್ಲ. ನನ್ನ ಹೆಂಡತಿಯ ಅಣ್ಣನ ಹೆಂಡತಿಯು ಸದರಿ ಊರಿನ ರಾಮನಹಳ್ಳಿ ಚಂದ್ರಪ್ಪ ಮತ್ತು ಚಂದ್ರವ್ವ ರವರ ಮನೆತನದ ಹೆಣ್ಣು ಮಗಳು. ಸದರಿ ಮನೆತನದ ಸುಮಾರು 2-3 ಮನೆಗಳು ಇವೆ. ಸದರಿ ವಿಚಾರವನ್ನು ನನ್ನ ಪಿರ್ಯಾದಿಯಲ್ಲಾಗಲೀ ಅಥವಾ ನೋಟಿಸನಲ್ಲಿ ಹೇಳಿ ಬರೆಸಿಲ್ಲ. ಆರೋಪಿ ನನಗೆ ಪರಿಚಯವಿಲ್ಲ ಆದ್ದರಿಂದ ನಾನು ಸದರಿ ವಿಚಾರವನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ಜೂನ್ 20, 2020 ನೇ ಇಸ್ವಿಯಲ್ಲಿ ಹಣ ಕೇಳಿರುತ್ತಾರೆ ಸಾಕ್ಷಿಯು ಮುಂದುವರೆದು ಜೂನ್ 2020 ರಂದು ಕೇಳಿದ್ದರು ಎಂದು ತಾರೀಖು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಜೂನ್ 20, 2020 ರಂದು ಹಣ ಕೇಳಿದ್ದರು ಎಂದು ನನ್ನ ಪಿರ್ಯಾದಿಯಲ್ಲಿ ಅಥವಾ ನೋಟಿಸನಲ್ಲಿ ಹೇಳಿ ಬರೆಸಿದ್ದೇನೆ. ಸಾಕ್ಷಿಗೆ ನಿಪಿ.3 ನ್ನು ತೋರಿಸಲಾಗಿ ನಿಪಿ.3 ರಲ್ಲಿ ಈ ರೀತಿ ಹೇಳಿ ಬರೆಸಿಲ್ಲ ಎಂದು ನುಡಿಯುತ್ತಾರೆ. ಜೂನ್ 2020 ರಲ್ಲಿ ಹಣವನ್ನು ಕೇಳಿದ್ದರು ಎಂದು ನನ್ನ ಪಿರ್ಯಾದಿಯಲ್ಲಾಗಲೀ ಅಥವಾ ನೋಟಿಸನಲ್ಲಿ ಬರೆದಿದ್ದಾರಾ ಎಂದು ನಾನು ವಕೀಲರನ್ನು ಕೇಳಿ

ತಿಳಿದುಕೊಂಡಿಲ್ಲ. ಸದರಿ ವಿಚಾರವನ್ನು ಕೇಳಿ ತಿಳಿದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ನಾನು ಆರೋಪಿಗೆ ಹಣ ನೀಡಿಲ್ಲ ಆದ್ದರಿಂದ ಕೇಳಿ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಗೆ 5 ಲಕ್ಷ ರೂಗಳನ್ನು ಭತ್ತ ಮಾರಿ ಬಂದ ಹಣದಿಂದ ನೀಡಿರುತ್ತೇನೆ. ಭತ್ತವನ್ನು ದಾವಣಗೆರೆಯ ಜಗಳೂರು ಮಿಲ್ ಗೆ ಮಾರಾಟ ಮಾಡಿದ್ದೆನು. ಸದರಿ ಭತ್ತವನ್ನು ಮಾರಾಟ ಮಾಡಿದ ಭತ್ತದ ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಭತ್ತವನ್ನು ಜಗಳೂರು ಮಿಲ್ ನಲ್ಲಿ ಜೂನ್ 2020 ನೇ ಇಸ್ವಿಯಲ್ಲಿ ಮಾರಾಟ ಮಾಡಿದ್ದೆನು. ದಿನಾಂಕ ನನಗೆ ನೆನಪಿಲ್ಲ. ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ಭತ್ತವನ್ನು ನಾಟಿ ಮಾಡುತ್ತಾರೆ ಎಂದರೆ ಸಾಕ್ಷಿಯು ಆಗಸ್ಟ್ ತಿಂಗಳಲ್ಲಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2020 ರಲ್ಲಿ ಕೋವಿಡ್–19 ಇತ್ತು ಎಂದರೆ ಸರಿ. ಏಪ್ರಿಲ್ 2020 ರಿಂದ ಜುಲೈ ಮೊದಲನೇ ವಾರದವರೆಗೂ ಲಾಕ್ ಡೌನ್ ಇತ್ತು ಎಂದರೆ ಸರಿ. ಈ ರೀತಿ ಲಾಕ್ ಡೌನ್ ಇದ್ದುದ್ದರಿಂದ ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಹೋಗಲು ನಿರ್ಭಂದ ಇತ್ತು ಎಂದರೆ ಸರಿ. ಅದೇ ರೀತಿ ದೊಡ್ಡ ವ್ಯಾಪಾರ ವ್ಯವಹಾರಳಿಗೆ ನಿರ್ಭಂದನೆ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ರೈತಾಪಿ ವ್ಯವಹಾರಗಳು ನಡೆಯುತ್ತಿದ್ದವು ಎಂದು ನುಡಿಯುತ್ತಾರೆ. ಈ ರೀತಿ ಲಾಕ್ ಡೌನ್ ಇದ್ದುದರಿಂದ ಆರೋಪಿ ಹಣ ಕೇಳಲು ಬರುವ ಸಂದರ್ಭ ಇರಲಿಲ್ಲ ಎಂದರೆ ಸರಿಯಲ್ಲ. ಲಾಕ್ ಡೌನ್ ಇದ್ದುದರಿಂದ ತುರ್ತು ಪರಿಸ್ಥಿತಿ ಹಾಗೂ ರೈತಾಪಿ ಕಾರ್ಯಗಳನ್ನು ಹೊರತು ಪಡಿಸಿ ಸಾಮಾನ್ಯವಾಗಿ ಓಡಾಡಲು ನಿರ್ಭಂದನೆ ಇತ್ತು ಎಂದರೆ ಸರಿ. ಈ ರೀತಿ ನಿರ್ಭಂದನೆ ಇದ್ದುದರಿಂದ ಆರೋಪಿ ನಮ್ಮ ಮನೆಗೆ ಬಂದಿಲ್ಲ ಹಣ ಕೇಳಿಲ್ಲ ಎಂದರೆ ಸರಿ.

ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ತಿಳುವಳಿಕೆ ಇದೆ ಎಂದರೆ ಸರಿ. 20 ಸಾವಿರಕ್ಕಿಂತ ಹೆಚ್ಚಿನ ಹಣದ ವ್ಯವಹಾರವನ್ನು ಬ್ಯಾಂಕ್ ಮೂಲಕ ಮಾಡಬೇಕು ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಆದ್ದರಿಂದ ಭತ್ತವನ್ನು ಪಡೆದ ಮಿಲ್ ನವರು ನನಗೆ 5 ಲಕ್ಷ ರೂಗಳನ್ನು ನಗದು ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಬ್ಯಾಂಕ್ ಖಾತೆಯನ್ನು ಹೊಂದಿದ್ದೇನೆ. ಆರೋಪಿಗೆ ಹಣವನ್ನು ನನ್ನ ಬ್ಯಾಂಕ್ ಖಾತೆ ಮುಖಾಂತರ ನೀಡಲು ನನಗೆ ತೊಂದರೆ ಇರಲಿಲ್ಲ. ಆರೋಪಿಗೆ ನಾನು ಯಾವುದೇ ಹಣ ನೀಡಿಲ್ಲ ಆದರೂ ಸಹ ನಗದು ರೂಪದಲ್ಲಿ ಹಣ ನೀಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ಟಾಟಾ ಸುಮೋ ಸಾಲದ ಕಂತುಗಳನ್ನು ಕಟ್ಟಲು ಹಾಗೂ ಕೋವಿಡ್ ನಲ್ಲಿ ಮನೆಯಲ್ಲಿ ಆರ್ಥಿಕ ತೊಂದರೆ ಇದ್ದುದರಿಂದ ನನ್ನಿಂದ ಹಣವನ್ನು ಸಾಲವಾಗಿ ಪಡೆದಿರುತ್ತಾರೆ. ನನ್ನ ಪಿರ್ಯಾದಿಯಲ್ಲಿ ಆರೋಪಿಯ ಕೌಟುಂಬಿಕ ಕಾನೂನಾತ್ಮಕ ಅವಶ್ಯಕತೆಗಳು ಇದ್ದವು ಎಂದು ಹೇಳಿದ್ದು ಅವುಗಳು ಯಾವುವು ಎಂದರೆ ಸಾಕ್ಷಿಯು ಕಾನೂನಾತ್ಮಕ ಅವಶ್ಯಕತೆಗಳು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಅದು ಏನು ಎಂದು ನಾನು ನನ್ನ ವಕೀಲರಿಂದ ಕೇಳಿ ತಿಳಿದುಕೊಂಡಿಲ್ಲ. ನಮ್ಮ ವಕೀಲರು ತಯಾರಿಸಿದ ಪಿರ್ಯಾದಿಗೆ ನಾನು ಸಹಿ

ಹಾಕಿರುತ್ತೇನೆ. ಸದರಿ ಕಾನೂನಾತ್ಮಕ ಅವಶ್ಯಕತೆಗಳ ಬಗ್ಗೆ ನಾನು ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ನಾನು ನೀಡಿದ ಹಣಕ್ಕೆ ಆರೋಪಿ ನನಗೆ ಭದ್ರತೆಗಾಗಿ ನಿಪಿ.1 ಚೆಕ್ ನ್ನು ನೀಡಿರುತ್ತಾರೆ. ನಿಪಿ.1 ರಲ್ಲಿ ಮೊತ್ತವನ್ನು ನಮೂದಿಸಿದ ಬರವಣಿಗೆಯಲ್ಲಿನ ಲಕ್ಷ ಶಬ್ದವನ್ನು ತಿದ್ದಲಾಗಿದೆ ಎಂದರೆ ಸರಿ. ನಿಪಿ.1 ರಲ್ಲಿರುವ ಬರವಣಿಗೆ ಮೊತ್ತ, ದಿನಾಂಕ ಒಂದೇ ಶಾಹಿ ಮತ್ತು ಬರವಣಿಗೆಯಲ್ಲಿದೆ ಎಂದರೆ ಸರಿ. ಆರೋಪಿ ನಿಪಿ.1 ರ ಮೇಲೆ ಸಹಿಯನ್ನು ಅವರೇ ಮಾಡಿಕೊಂಡು ಬಂದಿರುತ್ತಾರೆ. ಆರೋಪಿಗೆ ನಾನು ಚೆಕ್ಕಿಗೆ ಸಹಿ ಮಾಡಿಕೊಡು ಎಂದು ಕೇಳಿದ್ದೆನು. ನಿಪಿ.1 ರಲ್ಲಿರುವ ಬರವಣಿಗೆ ಹಾಗೂ ಸಹಿ ಎಲ್ಲವೂ ನನಗೆ ಕೊಟ್ಟಾಗ ಇತ್ತು. ಆಗ ನಾನು ಆರೋಪಿಯನ್ನು ಅದರಲ್ಲಿದ್ದ ಬರವಣಿಗೆ ಹಾಗೂ ಸಹಿ ಬೇರೆ ಬೇರೆ ಶಾಹಿಯಲ್ಲಿ ಏಕೆ ಇದೆ ಎಂದು ವಿಚಾರಿಸಲಿಲ್ಲ. ಆ ರೀತಿ ವಿಚಾರಿಸಲು ನನಗೆ ತೊಂದರೆ ಇರಲಿಲ್ಲ. ಆರೋಪಿಗೆ ನನ್ನೆದುರಿಗೆ ಬೇರೆ ಚೆಕ್ಕನ್ನು ಬರೆದು ಸಹಿ ಮಾಡಿಕೊಡು ಎಂದು ನೀವು ಕೇಳಲಿಲ್ಲವಾ ಎಂದರೆ ಸಾಕ್ಷಿಯು ನಿಪಿ.1 ಚೆಕ್ ನ್ನು ಈಗಾಗಲೇ ಕೊಟ್ಟಿದ್ದರಿಂದ ನಾನು ಕೇಳಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಆರೋಪಿಯ ವಕಾಲತ್ ನಾಮಾ ದಲ್ಲಿರುವ ಸಹಿಯನ್ನು ಹಾಗೂ ನಿಪಿ.1 ರಲ್ಲಿರುವ ಆರೋಪಿಯ ಸಹಿಯನ್ನು ತೋರಿಸಲಾಗಿ ಎರಡೂ ಬೇರೆ ಬೇರೆ ಇದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಹಣ ನೀಡುವವರು ಭದ್ರತೆಗಾಗಿ ತಮ್ಮೆದುರಿಗೆ ಚೆಕ್ಕಿನ ಮೇಲೆ ಸಹಿಯನ್ನು ಪಡೆಯುತ್ತಾರೆ ಎಂದರೆ ಸಾಕ್ಷಿಯು ಕೆಲವರು ಪಡೆಯುತ್ತಾರೆ ಕೆಲವರು ಪಡೆಯುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆಎಂಎಫ್‌ಸಿ, ಹರಿಹರ.